DOC-245
T-D-2

R No KKNN 12 18-2-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂಭ್ರಮಿಸಿದ ಪತ್ರಿಕೆ
First Golden Jubilee Celebrated Paper in The State
** Now in 57 th Year **
'Satyavadi' daily, Mysore 4

ಸ್ಥಾಪಕರು: ಅರಮನೆ ಪುರಸ್ಕರ್ತರಾದ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರಾನಂತರ ಎಂ. ಎಸ್. ಕೃಷ್ಣರಾವ್ [3 ಪೈಸೆ

ರಕ್ಷಣೆ ನೀಡುವುದಾಗಿ ನಾಯಿಕ್‌ರ ಭರವಸೆ

ಕರ್ನಾಟಕ ನಮ್ಮ ಕರ್ನಾಟಕ

ಜಗದುದ್ದ ಬೆಳೆಯುತ್ತ ಸಗದಗಲ ಪರಿ
ಯುತ್ತ
ಜಗವನ್ನೇ ಮೆಟ್ಟುತ್ತ ಕರ್ನಾಟ ।
ಜಗವೆಲ್ಲ ಸುತ್ತಿಕ್ಕಿ ಜನಕೆಲ್ಲ ಮುತ್ತಿಕ್ಕಿ
ಅಕಾಶಕ್ಕೇರುತ್ತ ಕರ್ನಾಟ ॥
ಪಂಪ-ರನ್ನರ ಹೊತ್ತು ನಾರಣಪ್ಪನ ಹೆತ್ತು
ಕಳೆಗಟ್ಟಿ ಮೆರೆದಿತ್ತು ಕರ್ನಾಟ ।
ಅಕ್ಕರಕ್ಕರಗಳನು ಅಕ್ಕರದಿ ಕಲಿಸಾಕಿ
ಶ್ರೀಮಂತವಾಗಿತ್ತು ಕರ್ನಾಟ ॥
ಮೊಲೆಯಲ್ಲಿ ಹಾಲಿರಲು ಒಲೆಯಲ್ಲಿ ಬಿಸಿ
ಹಾಲಿ
ಕಲೆಯಲ್ಲಿ ಹರಡಿತ್ತು ಕರ್ನಾಟ ।
ಒಂದಲ್ಲ ಎರಡಲ್ಲ ಹತ್ತಲ್ಲ ನೂರಲ್ಲ
ಸಾವಿರದ ಲೆಕ್ಕವಿದು ಕರ್ನಾಟ ॥
ಎದ್ದು ಬೀಳಲಿಲ್ಲೀ ಪದ್ಯ ಮಾಡಿಸಲಿಲ್ಲೆ
ಬುದ್ಧಿ ಇಲ್ಲದೆ ಬಂತೆ ಕರ್ನಾಟ ?
ಇದ್ದು ಹೋದವರೆಲ್ಲ ಗುದ್ದಾಡಿ ಗುದ್ದಾಡಿ
ಪದ್ಯ ಮಾಡುತ ಬಂತು ಕರ್ನಾಟ ॥
ಮೊನ್ನೆ ಇನ್ನೂ ಬಿಸಿರಿ ನಿನ್ನೆ ಹೊಂದಿತು ಹೆಸರು
ಈಗಂತು ಬಲು ಹಿಸಿರು ಕರ್ನಾಟ ।
ನಾಳೆಯಿಂದ ಬೆಳೆಯಿಂದ ಕಳೆಕುಂಬಿ
ನಿಂತಾಗಿ
ಕರ್ನಾಟ ಕನ್ನಡದ ತಾಯ್ ನೋಟ ॥
— ಹಿ ಮ ಬಸವಯ್ಯ [ಕನ್ನಡ ನುಡಿ]

★

ಮತ್ತೊಂದು ಗಂಡಾಂತರ

ನವದೆಹಲಿ— ದೇಶವು ವಿದೇಶೀ ವಿನಿ
ಮಯ ಉತ್ಕಟತೆ ಎದುರಿಸಲು ಅವಶ್ಯ
ಪದಾರ್ಥಗಳಾದ ಕಲ್ಲಿದ್ದಿ, ಬಟ್ಟೆ ಮತ್ತು
ಸಿಮೆಂಟಿನ ರಫ್ತು ಹೆಚ್ಚಿಸುವದಕ್ಕಾಗಿ, ಈ
ಪದಾರ್ಥಗಳ ಬಳಕೆ ಬಗ್ಗೆ ಸರ್ಕಾರ ಹ
ತೋಟ್ಟು ಹೇರುವ ಸಂಭವವಿರುವುದನ್ನು ಕೈ
ಗಾರಿಕಾ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ಸೂ
ಚಿಸಿದ್ದಾರೆ.

ಜೈನ ರಥ ಪ್ರತಿಭಟನೆ

ಬೊಂಬಾಯಿ— ಮಹಾವೀರಸ್ವಾಮಿಯ 2500 ನೇ ನಿರ್ವಾಣೋತ್ಸವನ್ನು ರಾಷ್ಟ್ರೀಯ ಪ್ರಮಾಣದಲ್ಲಿ ನಡೆಸುವ ಬಗೆ ಪ್ರಮುಖ ಜೈನ ಸಂಘ "ಶ್ರೀ ಜೈನ ಪ್ರವಚನ ಟ್ರಸ್ಟ್" ಪ್ರತಿಭಟಿಸಲು ಸಹಿ ಸಂಗ್ರಹದಲ್ಲಿ ತೊಡಗಿದೆ — ಬೊಂಬಾಯಿ ಮತ್ತಿತರ ಸ್ಥಳಗಳ ಜೈನ ಸಂಘಗಳು ಮಹಾವೀರ ಸ್ವಾಮಿಯ ಕುರಿತ ಚಲನ ಚಿತ್ರ ತಯಾರಿಕೆ ಬಗ್ಗೆ ಸರಕಾರದ ಯೋಜನೆಯನ್ನು ಪ್ರತಿಭಟಿಸಿ ತಂತೀ ಕಳಿಸಿವೆ.

ರೂ. 14 ಲಕ್ಷ ಕಳ್ಳತನ

ಕರ್ನೂಲು — ಬಂಗಸಪಲ್ಲಿಯಲ್ಲಿನ ಸಿಂಡಿಕೇಟು ಬ್ಯಾಂಕಿನಲ್ಲಿ ರೂ. 14 ಲಕ್ಷದ ಹಣ ಮತ್ತು ಚಿನ್ನ ಕಳುವಾಗಿದೆ.

ಕನ್ನಡ ಸಂಘಗಳಿಗೆ ಪುಸ್ತಕಗಳು ಉಚಿತ

ಬೆಂಗಳೂರು— ಕನ್ನಡ ಸಾಂಸ್ಕೃತಿಕ ಪತ್ರಿಕೆ, ಬೊಂಬಾಯಿ, ಆಗ್ರಾ, ಹೈದರಾಬಾದು, ಎದರಾಸು, ಗೋವಾ, ಇಂಗ್ಲೆಂಡ್, ಅಮೇರಿಕದಲ್ಲಿರುವ ಕನ್ನಡ ಸಂಘಗಳಿಗೆ ಕಡೇಪಕ್ಷ 500 ಕನ್ನಡ ಪುಸ್ತಕಗಳನ್ನು ಉಚಿತವಾಗಿ ಕೊಡಲು ಯೋಜಿಸಿದೆಯೆಂದು ಅಧ್ಯಕ್ಷ ಶ್ರೀ ಜಿ. ನಾರಾಯಣ ರವರು ಪತ್ರಿಕೆಯವರಿಗೆ ತಿಳಿಸಿದರು.

ಛತ್ರಿ
ರೇನ್ ಕೋಟ್ಸುಗಳಿಗೆ
ಬ್ಯಾಂಕ್ ರೋಡ್ ಬಾಹುಸಾರ್
A Firm known for
Genuine Good Business

ಭಾಷಾಅಲ್ಪಸಂಖ್ಯಾತರ ರಕ್ಷಣೆ

ಬೆಂಬಾಯಿ— ಕನ್ನಡಿಗರೂ ತುಳು ಕೇರಳಿಗರೂ ಸೇರಿ ಎಲ್ಲಾ ಭಾಷಾ ಅಲ್ಪಸಂಖ್ಯಾತರಿಗೂ ಪೂರ್ಣ ರಕ್ಷಣೆ ಕೊಡುವುದು ಮಹಾರಾಷ್ಟ್ರ ಸರಕಾರದ ದೃಢವಾದ ನೀತಿಯೆಂದು ನೈಸೂರು ತುಳು ಕೇರಳ ಮುಖ್ಯ ಮಂತ್ರಿಗಳಿಗೆ ಮಹಾರಾಷ್ಟ್ರ ಮುಖ್ಯ ಮಂತ್ರಿ ಶ್ರೀ ನಾಯಿಕ್‌ರವರು ಭರವಸೆ ಇತ್ತಿದ್ದಾರೆ.

ಧ್ವಜಗಳು— ಅಂಗಡಿ ಚೀಲಗಳು, ದಿಂಬಿನ ಚೀಲಗಳೂ ಆಗಿವೆ!

ಬುಲಾಂಡಿಷೆರ್ ಇಲ್ಲಿಯ ಚುನಾವಣೆಯ ಬಿರುಗಾಳಿಯಲ್ಲಿ ರಾಜಕೀಯ ಪಕ್ಷಗಳು ಮನೆಗಳ ಮೇಲೆ ಮತ್ತು ಧ್ವಜಸ್ತಂಭಗಳ ಮೇಲೆ ಹಾರಾಡಿಸಲು ಹಂಚಿದ್ದ ಅನೇಕ ಧ್ವಜಗಳು ಅಂಗಡಿ ಚೀಲಗಳಾಗಿಯೂ ದಿಂಬಿನ ಚೀಲಗಳಾಗಿಯೂ ಉಪಯೋಗಿಲಾಗುತ್ತಿವೆ.

ಕಂಟ್ರಾಕ್ಟರರಿಗೆ ಹಿತೋಕ್ತಿ

ಬೆಂಗಳೂರು ನಗರಾಭಿವೃದ್ಧಿ ಮಂಡಲಿ ಅಧ್ಯಕ್ಷ ಶ್ರೀ ಬಿ ಟಿ ಕೋಪಣ್ಣನವರಿಗೆ ಅಭಿನಂದಿಸಲು ರಾಜ್ಯದ ಕಂಟ್ರಾಕ್ಟು ಪವರ್ತಾರಂಭದಲ್ಲಿ, ಅಧ್ಯಕ್ಷತೆವಹಿಸಿದ್ದ ಪೌರಾಡಳಿತ ಮಂತ್ರಿ ಶ್ರೀ ಡಿ ಕೆ ನಾಯಕರ್ ರವರು, ಕಂಟ್ರಾಕ್ಟರರು ಪಕ್ಷಪಾತ ಧೋರಣೆಯಿಂದ ಕೆಲಸಗಳನ್ನು ಟೆಂಡರ್‌ನಿಂದ ಪ್ರಾಮಾಣಿಕವಾಗಿ ಸೇರಿವೇರಿಸಬೇಕೆಂದು ಹೇಳಿದರು.

ಅಪೂರ್ವ ಸರಸ್ವತಿ ವಿಗ್ರಹ

ಕ್ಷೇದರಾಬಾದ — ಕರೀಂನಗರ್ ಜಿಲ್ಲೆಯ ಶ್ರೀ ಕಾಳೇ ಶಂಕರ ದೇವಾಲಯದಲ್ಲಿ ಒಂದು ಅಪೂರ್ವ ಸರಸ್ವತಿ ವಿಗ್ರಹವು ಗುರ್ತಿಸಲ್ಪಟ್ಟಿದ್ದು, ಅದು ಸೌಭಾಗ್ಯ ವಾಗೀಶ್ವರಿ ಎಂದೂ, 9 ನೇ ಶತಮಾನದ ಹಿಂದಿನದೆಂದೂ ಹೇಳಲಾಗಿದೆ.

ಬೆಳ್ಳೀ ಬೆಳಕು ಏಗುತ್ತಿದೆ!

ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರ ಹೇಳಿಕೆ

ಮೈಸೂರು— ರಾಜ್ಯದಲ್ಲಿಯ ವಸತಿ ನೀತಿಯನ್ನು ಸರಕಾರ ಪರಿಷ್ಕರಿಸಿದೆಯೆಂದೂ, ಹೊಸ ಸ್ಕೀಂ ಪ್ರಕಾರ ಬೆಂಗಳೂರು ಮತ್ತು ಮೈಸೂರು ನಗರಾಭಿವೃದ್ಧಿ ಮಂಡಲಿಗಳು ಮಾಡುವ ಹೊಸ ಲೇಔಟುಗಳಲ್ಲಿಯ ನಿವೇಶನಗಳ 3 ನೇ 1 ಭಾಗವನ್ನು ಹೌಸಿಂಗ್ ಬೋರ್ಡ್‌ಗೆ ಒದು ವಿಧ್ಯುಕ್ತ ಮತ್ತು ಕೆಳ ದರ್ಜೆ ಆದಾಯ ತಂಡದವರಿಗೆ ಮನೆ ಕಟ್ಟಲು ಕಾಪಿಡಲ್ಪಡಬೇಕೆಂದೂ ಭಾನುವಾರ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಬಿ.ಎ. ಕೆಂಗೇಗೌಡರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು — ನಗರಪ ಹೊಸ ಲೇಔಟುಗಳಲ್ಲಿ 10000 ನಿರ್ಮಿಸಲಾಗುವುದೆಂದೂ, ಇವುಗಳನ್ನು ಸಾಧ್ಯವಾದ ಮಟ್ಟಿಗೆ ಮಧ್ಯಮ ಮತ್ತು ಅಲ್ಪಾದಾಯ ಮತ್ತು ನಿರ್ಬಲ ಜನರಿಗೆ ಹಂಚಲಾಗುವುದೆಂದೂ ಹೇಳಿದರು.

ಕರ್ನಾಟಕ ಲಾಟರಿ

ಗುಲ್ಬರ್ಗ— ಇಲ್ಲಿ ಭಾನುವಾರ ತೆಗೆದ ಲಾಟರಿಯಲ್ಲಿ ರೂ. 1 ಲಕ್ಷದ 2 ಪ್ರಥಮ ಬಹುಮಾನಗಳು HZ 1551504 ಮತ್ತು IA 1333641 ನಂಬರುಗಳ ಟಿಕೇಟುಗಳಿಗೆ ದೊರೆತಿವೆ.

ಡಾಕ್ಟರುಗಳ ಮುಷ್ಕರ

ನವದೆಹಲಿ— ದೇಶದಲ್ಲಿ ರಾಜ್ಯಗಳ ಮತ್ತು ಕೇಂದ್ರ ಪ್ರದೇಶಗಳಲ್ಲಿ 7000 ಜೂನಿಯರ್ ಡಾಕ್ಟರುಗಳು ಮುಷ್ಕರ ನಡೆಸುತ್ತಿದ್ದು, ಇನ್ನೂ ಸೇರುತ್ತಿದ್ದಾರೆ.

ಅಧಿಕಾರದ ಲಾಲಸೆ ಇಲ್ಲ

ಅಹಮದಾಬಾದು— ತಾವು ಭಾರತದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಿಲ್ಲ ವೆಂದೂ, ತಾವು ಅಧ್ಯಕ್ಷರು ಅಥವಾ ಪ್ರಧಾನಿಗಳಾಗಬೇಕೆಂದಿದ್ದರೆ ಕೆಲವು ವರ್ಷಗಳ ಹಿಂದೆಯೇ ಆಗಬಹುದಿತ್ತೆಂದೂ, ಅಧಿಕಾರಕ್ಕೆ ಅಕಾಂಕ್ಷಿಯಾಗಿರುವುದನ್ನು ಗಾಂಧೀಜಿ ಮತ್ತು ವಿನೋಬಾರಿಂದ ತಾವು ಕಲಿತುಕೊಂಡಿರುವುದಾಗಿಯೂ ಶ್ರೀ ಜಯಪ್ರಕಾಶ ನಾರಾಯಣರವರು ಬಹಿರಂಗ ಸಭೆಯಲ್ಲಿ ಹೇಳಿದರು.

ಒಂದು ವರ್ಷ ವ್ಯಾಸಂಗಕ್ಕೆ ರಜಾ ಕೊಡಿ

ಅಹಮದಾಬಾದು— ಕಾಲೇಜು ವಿದ್ಯಾರ್ಥಿಗಳು ಒಂದು ವರ್ಷ ವಿದ್ಯಾಭ್ಯಾಸ ನಿಲ್ಲಿಸಿ ದೇಶದಲ್ಲಿ ಯುವಕ ಕ್ರಾಂತಿ ಕಾರ್ಯಕ್ಕೆ ಬರಬೇಕೆಂದು, ಶ್ರೀ ಜಯಪ್ರಕಾಶ ನಾರಾಯಣರು ವಿಶ್ವವಿದ್ಯಾಲಯದ ಬೈಲು ಆವರಣದಲ್ಲಿ ವಿದ್ಯಾರ್ಥಿಗಳನ್ನು ಕುರಿತು ಮಾಡಿದ ಭಾಷಣದಲ್ಲಿ ಹೇಳಿದರು.

ಮಿಲಿಯ ಮಾರ್ಕ್ ಬೆಲೆಯ ಅಚ್ಚು ಯಂತ್ರ

ಎಲ್ಸ್‌ಬರ್ಗ್ (ಜೀಯಫೆ)— ಡಚ್ ಸಂಸ್ಥೆಯೊಂದರ ತಯಾರಿಕೆಯಾದ ವೊರ್ಸ್‌ಬರ್ಗ್‌ನ ಬೃಹತ್ ಅಚ್ಚುಯಂತ್ರದ ಬೆಲೆ ೫ ಮಿಲಿಯ ಮಾರ್ಕ್‌ಗಳಾಗಿದ್ದು ಅದು ಒಂದೇಸಲ 192 ಪುಟದ ವೃತ್ತಪತ್ರವನ್ನು ಅಚ್ಚುಮಾಡಬಲ್ಲದು ; ಇದಲ್ಲದೆ ಇದಕ್ಕಿಂತ ಕಡಮೆ ಪ್ರಮಾಣದ ಅಚ್ಚುಪತ್ರವನ್ನೂ ಅಷ್ಟೇ ವೇಗದಲ್ಲಿ ತಯಾರು ಮಾಡಬಲ್ಲುದು. (ಯೂ ಪಿ ಎಸ್)

SHAKTI
SUDHA

A Superb Tonic



Help The Gorakshana

— HumanitarisnPropoganda Monthly ....

Protect the Cow

ವುಡ್‌ಲಾಂಡ್ 15 2 74 ರಿಂದ
ಅವೋಫು 6 ನೇ ವಾರ

ಪ್ರತಿ ದಿನ 3 ಪ್ರದರ್ಶನಗಳು

ಅಮಿಯಾಸ್‌ರವರ ಹಿಂದಿ ಕಲರ್ ಮಹೋನ್ನತ ಚಿತ್ರ

ಅ ಭಿ ಮಾ ನ್

ಪಾತ್ರ – ಅಮಿತಾಬ್‌ಚರ್ ಜಯಬಾದುರಿ ಡೇವಿಡ್ ಬಿಂದು

ಬೆಳಿಗಿನ ಪ್ರದರ್ಶನ 10 30 ಕಪ್ಪು ಬಿಳುಪು

ಅ ಪೆ ರಾ 14 2 74 ರಿಂದ

ರಾಜಕುಮಾರ್ ಅಶ್ವತ್ಥ್ ಭಾರತಿ ಅಭಿನಯಿಸಿರುವ ಕನ್ನಡ ಚಿತ್ರ

ಪಾರ್ವತಿ ಕಲ್ಯಾಣ

6 ದಿನಗಳು ಮಾತ್ರ

ದಿನ 3 ಪ್ರದರ್ಶನಗಳು

All India Blind Welfare Week

21 st February to 27 February 1974

Flag Day on 26 th February 1974

Donate generouly for the cause of the the Blind

Sponsored by :

Sri Sri Bijoy Krishna Ash am Relief ociety [Regd]
Netaji Eye & General Hospital
P. O. Ramachand apur Ashram, Dist. Purulia (W. Bengal)

ಭಾರತದಲ್ಲಿ ಗೋವಧೆ
ಪೂರ್ಣ ನಿಶ್ಶೇಧವಾಗಲಿ

Contribute Liberally
to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Thamaraja puram Mysore